## ಕರ್ನಾಟಕ ವಿಧಾನ ಪರಿಷತ್ತು
## 141ನೇ ಅಧಿವೇಶನ

**ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ** 365

**ಸದಸ್ಯರ ಹೆಸರು** ಶ್ರೀ ಕೆ.ಹರೀಶ್ ಕುಮಾರ್
ವಿಧಾನ ಸಭೆಯಿಂದ ಚುನಾಯಿತರಾದವರು

**ಉತ್ತರಿಸುವ ದಿನಾಂಕ** 23-09-2020

**ಉತ್ತರಿಸುವ ಸಚಿವರು** ಮಾನ್ಯ ಲೋಕೋಪಯೋಗಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲಾ, ಬೆಳ್ತಂಗಡಿ ತಾಲ್ಲೂಕಿನಲ್ಲಿ ನೆರೆಯಿಂದ ಹಾನಿಯಾಗಿ ಸಂಪೂರ್ಣ ಕುಸಿತಗೊಂಡಿರುವ ಸಂಪರ್ಕ ಸೇತುವೆಗಳಿಗೆ ಅನುದಾನ ಮಂಜೂರಾಗಿದೆಯೇ; ಎಷ್ಟು ಸೇತುವೆಗಳಿಗೆ ಅನುದಾನ ಮಂಜೂರಾಗಿದೆ; ಕಾಮಗಾರಿ ಯಾವ ಹಂತದಲ್ಲಿವೆ; (ಅಂಕಿ-ಅಂಶಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು) | 2019-20 ನೇ ಸಾಲಿನಲ್ಲಿ ಉಂಟಾದ ಅತಿವೃಷ್ಟಿಯಿಂದ ಹಾನಿಗೊಳಗಾಗಿದ್ದ ಬೆಳ್ತಂಗಡಿ ತಾಲೂಕಿನ ಮುಂಡಾಜೆ - ಕಢಿರುದ್ಯಾವರ- ದಿಡುಪೆ - ಸಂಸೆ ರಸ್ತೆಯ ಕಿಮೀ 9.70 ರಲ್ಲಿನ (ಕುಕ್ಕಾವು) ಸೇತುವೆ ಸಂಪರ್ಕ ರಸ್ತೆಯನ್ನು ರೂ.130.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಮರು ನಿರ್ಮಾಣ ಮಾಡಲಾಗಿದೆ.<br><br>2020-21 ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲೂಕಿನಲ್ಲಿ ನೆರೆಯಿಂದ ಹಾನಿಯಾಗಿ ಸಂಪೂರ್ಣ ಕುಸಿತಗೊಂಡಿರುವ ಸಂಪರ್ಕ ಸೇತುವೆಗಳು ಯಾವುದು ಇರುವುದಿಲ್ಲ. ಆದರೆ, ರಾಜ್ಯ ಹೆದ್ದಾರಿ-37 ರ ಸುಬ್ರಮಣ್ಯ ಉಡುಪಿ ರಸ್ತೆಯಲ್ಲಿನ ಕಿ.ಮೀ. 39.50 ರಲ್ಲಿ ಹಾನಿಗೊಳಗಾಗಿರುವ ಮೋರಿ ಹಾಗೂ ತಡೆಗೋಡೆ ನಿರ್ಮಾಣ ಕಾಮಗಾರಿಯನ್ನು ರೂ.25.00 ಲಕ್ಷ ಅಂದಾಜು ಮೊತ್ತದಲ್ಲಿ ಕೈಗೆತ್ತಿಕೊಳ್ಳಲು ನೆರೆ ಹಾವಳಿ ಹಾಗೂ ಅತಿವೃಷ್ಟಿಯಿಂದ ಹಾನಿಗೊಳಗಾಗಿರುವ ರಸ್ತೆ/ಸೇತುವೆ ಕಾಮಗಾರಿಗಳ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆ ಮಾಡಲಾಗಿದ್ದು, ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು. |

ಲೋಇ/593/ಐಎಫ್ಎ/2020 (ಇ-ಕಚೇರಿ)

**(ಗೋವಿಂದ ಎಂ ಕಾರಜೋಳ)**
ಉಪಮುಖ್ಯಮಂತ್ರಿಗಳು ಹಾಗೂ
ಲೋಕೋಪಯೋಗಿ ಸಚಿವರು.